UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Saturday
04-04-2026

ಎಫ್‌ಕೆಸಿಸಿಐ ಆಯೋಜನೆ • ಕೃಷಿ ನವೋದ್ಯಮಗಳು ಭಾಗಿ

24ರಿಂದ ಕೃಷಿ ತಂತ್ರಜ್ಞಾನ ಶೃಂಗಸಭೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ವತಿಯಿಂದ (ಎಫ್‌ಕೆಸಿಸಿಐ) 'ಅಂತರರಾಷ್ಟ್ರೀಯ ಕೃಷಿ ತಂತ್ರಜ್ಞಾನ ಶೃಂಗಸಭೆ-2026' ಅನ್ನು ಏಪ್ರಿಲ್ 24ರಿಂದ 26ರವರೆಗೆ ನಗರದ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಆಯೋಜಿಸಲಾಗಿದೆ.

ಈ ಶೃಂಗಸಭೆಯು ರೈತರು, ಕೃಷಿ ಉದ್ಯಮಿಗಳು, ನವೋದ್ಯಮಗಳು ಮತ್ತು ಖರೀದಿದಾರರನ್ನು ಒಂದೇ ವೇದಿಕೆಯಲ್ಲಿ ಸೇರಿಸಲಿದೆ. ಕೃಷಿ ಕ್ಷೇತ್ರದಲ್ಲಿನ ಹೊಸ ತಂತ್ರಜ್ಞಾನಗಳು, ಆವಿಷ್ಕಾರಗಳು, ಉಪಕರಣಗಳು, ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿನ ವ್ಯಾಪಾರ ಅವಕಾಶಗಳು, ಹೂಡಿಕೆ ಬಗ್ಗೆ ರೈತರು ನೇರವಾಗಿ ತಂತ್ರಜ್ಞಾನ ಪೂರೈಕೆದಾರರು, ಉದ್ಯಮಗಳು ಮತ್ತು ಸರ್ಕಾರದ ಪ್ರತಿನಿಧಿಗಳ ಜೊತೆ ಮಾತುಕತೆ ನಡೆಸಬಹುದು ಎಂದು ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ ಅವರು ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಕೃಷಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಶೃಂಗಸಭೆ ಏರ್ಪಡಿಸಲಾಗಿದೆ. ಮೂರು ದಿನವೂ ವಿಚಾರ ಸಂಕಿರಣಗಳು ನಡೆಯಲಿದ್ದು, 100ಕ್ಕೂ ಅಧಿಕ ಕೃಷಿ ನವೋದ್ಯಮಗಳು ಭಾಗವಹಿಸುವ ನಿರೀಕ್ಷೆ ಇದೆ. 200 ಮಳಿಗೆಗಳು ಇರಲಿದ್ದು, ಶೇ 80ರಷ್ಟು ಮಳಿಗೆಗಳನ್ನು ಕೃಷಿಕರಿಗೆ ಮೀಸಲಿಸಲಾಗುತ್ತದೆ ಎಂದರು.

ಎಫ್‌ಕೆಸಿಸಿಐನಲ್ಲಿನ ಉದ್ಯಮಿಗಳಿಂದ ಕೃಷಿ ಉಪಕರಣಗಳನ್ನು ಸಹಾಯಧನದಲ್ಲಿ ರೈತರಿಗೆ ನೀಡುವ ಕುರಿತು ಮಾತುಕತೆ ನಡೆಸಲಾಗುವುದು ಎಂದು ಹೇಳಿದರು.

ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್ ಮಾತನಾಡಿ, 'ರೈತರಿಗೆ ಹೊಸ ತಂತ್ರಜ್ಞಾನವನ್ನು ತಲುಪಿಸಲು ಎಫ್‌ಕೆಸಿಸಿಐ ಜೊತೆ ಕೈಜೋಡಿಸಿದ್ದೇವೆ. ಕೃಷಿ ಕ್ಷೇತ್ರದಲ್ಲಿ ಕಾರ್ಮಿಕರ ಸಂಖ್ಯೆ ಇಳಿಕೆಯಾಗಿದೆ. ಕೃಷಿಯನ್ನು ಲಾಭದಾಯಕವಾಗಿಸಲು ಕೃಷಿಯನ್ನು ಯಾಂತ್ರೀಕರಣಗೊಳಿಸಬೇಕಾದ ಅಗತ್ಯ ಇದೆ' ಎಂದರು.

'ಅಂತರರಾಷ್ಟ್ರೀಯ ಕೃಷಿ ತಂತ್ರಜ್ಞಾನ ಶೃಂಗಸಭೆ'ಯ ಮಾಹಿತಿ ಪತ್ರವನ್ನು ಬಿಡುಗಡೆ ಮಾಡಲಾಯಿತು. ಎಫ್‌ಕೆಸಿಸಿಐ ಪ್ರಧಾನ ಕಾರ್ಯದರ್ಶಿ ಲೋಕರಾಜ್, ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ನಿರ್ದೇಶಕ ವೈ.ಎನ್. ಶಿವಲಿಂಗಯ್ಯ, ಕುಲಪತಿ ಎಸ್.ವಿ.ಸುರೇಶ್, ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ, ಹಿರಿಯ ಉಪಾಧ್ಯಕ್ಷ ಟಿ. ಸಾಯಿರಾಂ ಪ್ರಸಾದ್ ಉಪಸ್ಥಿತರಿದ್ದರು

Prajavani pg 03

ಏ.24ರಿಂದ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಸಮಾವೇಶ



ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ(ಎಫ್‌ಕೆಸಿಸಿಐ) ವತಿಯಿಂದ ಏಪ್ರಿಲ್ 24 ರಿಂದ 26 ರವರೆಗೆ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಸಮಾವೇಶವನ್ನು ಬೆಂಗಳೂರು ಅರಮನೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಎಫ್‌ಕೆಸಿಸಿಐನ ಅಧ್ಯಕ್ಷೆ ಉಮಾರೆಡ್ಡಿ ತಿಳಿಸಿದರು.

ಎಫ್‌ಕೆಸಿಸಿಐನ ಸಭಾಂಗಣದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, 3 ದಿನಗಳ ಈ ಸಮಾವೇಶದಲ್ಲಿ ಕೃಷಿ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಮತ್ತು ಆಹಾರ ಸಂರಕ್ಷಣಾ ಕ್ಷೇತ್ರಗಳಲ್ಲಿ ಇರುವ ಅವಕಾಶಗಳು, ಹೂಡಿಕೆ ಮತ್ತು ನಾವೀನ್ಯತೆಗೆ ಒಂದು ಜಾಗತಿಕ ವೇದಿಕೆಯಾಗಲಿದೆ. ಪ್ರತಿದಿನ ಒಂದು ಲಕ್ಷಕ್ಕೂ ಹೆಚ್ಚು ರೈತರು, ಉದ್ಯಮಿಗಳು ಭೇಟಿ ನೀಡುವ ಸಾಧ್ಯತೆ ಇದೆ ಎಂದರು.

ಸ್ಟಾರ್ಟ್‌ಪ್ ಮತ್ತು ಹಲವು ಉದ್ದಿಮೆಗಳು ಹೂಡಿಕೆಗೆ ಈ ಸಮಾವೇಶ ಸಹಕಾರಿಯಾಗಲಿದೆ. ಭೂಮಿ, ಬೀಜ, ವಿಜ್ಞಾನ, ಸಂಶೋಧನೆ, ಕೈಗಾರಿಕೆ ಮತ್ತು ಸರಬರಾಜು ಸರಪಳಿಗಳನ್ನು ಸಂಪರ್ಕಿಸುವ ಜಾಗತಿಕ ವೇದಿಕೆಯಂತೆ ವಿನ್ಯಾಸಗೊಳಿಸಲಾಗಿದೆ. ಕೃಷಿಕರು, ತಂತ್ರಜ್ಞಾನ ಕ್ಷೇತ್ರದ ಉದ್ಯಮಿಗಳು, ಸರ್ಕಾರದ ಪ್ರತಿನಿಧಿಗಳು ಇದರಲ್ಲಿ ನೇರ ಸಂವಾದ ನಡೆಸುವ ಅವಕಾಶಗಳು ಇದೆ ಎಂದು ಮಾಹಿತಿ ನೀಡಿದರು. ಈ ಸಮಾವೇಶ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಆದಾಯ ಹೆಚ್ಚಳಕ್ಕೆ ಆರ್ಥಿಕವಾಗಿ ಅವರು ಸಬಲರಾಗಲು ಇದು ಸಹಕಾರಿಯಾಗಲಿದೆ. ಸುಮಾರು 300 ಕ್ಕೂ ಹೆಚ್ಚು ಪ್ರದರ್ಶಕರು, 30 ಸಾವಿರಕ್ಕೂ ಹೆಚ್ಚು ವ್ಯವಹಾರ ಪ್ರತಿನಿಧಿಗಳು, ಹಣಕಾಸು ಸಂಸ್ಥೆಗಳು ಪಾಲ್ಗೊಳ್ಳಲಿದ್ದಾರೆ ಎಂದರು.

Hosadiganta pg 06

ಏ.24ರಿಂದ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಸಮಾವೇಶ

ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಮತ್ತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಸಹಯೋಗದೊಂದಿಗೆ ಏ.24ರಿಂದ 26ರವರೆಗೆ ನಗರದ ಅರಮನೆ ಮೈದಾನ ತ್ರಿಪುರವಾಸಿನಿಯಲ್ಲಿ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಸಮಾವೇಶ ಆಯೋಜಿಸಲಾಗಿದೆ ಎಂದು ಎಫ್‌ಕೆಸಿಸಿ ಅಧ್ಯಕ್ಷೆ ಉಮಾ ರೆಡ್ಡಿ ತಿಳಿಸಿದರು. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶೃಂಗಸಭೆಯು ರೈತರು ಸಹ ಕೃಷಿ ಉದ್ಯಮಿಗಳಾಗುವತ್ತ ಅರಿವು ಮೂಡಿಸುವ ಉದ್ದೇಶ ಹೊಂದಿದೆ. ಕೃಷಿ ತಂತ್ರಜ್ಞಾನದಲ್ಲಿ ಹೂಡಿಕೆ ಸೇರಿದಂತೆ ಒಂದೇ ವೇದಿಕೆಯಲ್ಲಿ ಸೇರಿಸಿ ತಂತ್ರಜ್ಞಾನ ಮತ್ತು ನಾವೀನ್ಯತೆ ಮೂಲಕ ಕೃಷಿಯ ಭವಿಷ್ಯ ರೂಪಿಸುವುದು ಸಮಾವೇಶದ ಮುಖ್ಯ ಭಾಗವಾಗಿದೆ. 300ಕ್ಕೂ ಅಧಿಕ ಪ್ರದರ್ಶಕರು, 30 ಸಾವಿರಕ್ಕೂ ಅಧಿಕ ಕಂಪನಿಗಳ ಪ್ರತಿನಿಧಿಗಳು, ರೈತರು, ಉದ್ಯಮಿಗಳು ಸೇರಿ ನಿತ್ಯ 2 ಲಕ್ಷ ಜನರು ಭೇಟಿ ನೀಡಲಿದ್ದಾರೆ ಎಂದು ಅಂದಾಜಿಸಲಾಗಿದೆ ಎಂದರು.

Udayavani pg 03

ಐನೂರರ ಗಡಿ ದಾಟಿದ ಅಡಕೆ

■ ವಿಕ ಸುದ್ದಿಲೋಕ ಪುತ್ತೂರು(ದ.ಕ.)

ಈ ವರ್ಷದ ಅಡಕೆ ಕೊಯ್ಲು ಆರಂಭಗೊಂಡ ಬಳಿಕ ಮೊದಲ ಬಾರಿ ಹೊಸ ಅಡಕೆ ಧಾರಣೆ ಐನೂರರ ಗಡಿ ದಾಟಿದೆ. ಗುರುವಾರ 490 ರೂ. ಧಾರಣೆ ದಾಖಲಿಸಿದ ಮಂಗಳೂರು ಚಾಲಿ ಹೊಸ ಅಡಕೆ, ಶುಕ್ರವಾರ ಹಠಾತ್ 10 ರೂ. ವಿರಕ್ತಿಯಾಗಿ ಐನೂರರ ಗಡಿ ತಲುಪಿದೆ. ಇದು ಈ ಬಾರಿಯ ಅಡಕೆ ಋತುಮಾನದಲ್ಲಿ ದಾಖಲೆಯಾಗಿದೆ.

ಮೂರು ವಾರ ಹಿಂದೆ ಹೊಸ ಅಡಕೆ ಧಾರಣೆ ಇಳಿಕೆ ಹಾದಿ ಹಿಡಿಯಲಾರಂಭಿಸಿತ್ತು. ಕೆ.ಜಿಗೆ 485 ರೂ. ತಲುಪಿದ್ದ ದರ ಇಪ್ಪತ್ತೈದಕ್ಕೆ ಇಳಿಯುತ್ತ 460 ರೂ.ಗೆ ಬಂದಿತ್ತು. ಆದೇ ದರದಲ್ಲಿ ಒಂದು ವಾರ ಕಾಲ ಸ್ಥಿರವಾಗಿದ್ದ ಅಡಕೆ ಬಳಿಕ ಏರು ಹಾದಿ ಹಿಡಿಯಲಾರಂಭಿಸಿತು. ಒಂದೇ ವಾರದಲ್ಲಿ ಹಿಂದಿನೆಲ್ಲ ಇಳಿಕೆಯ ಪ್ರಮಾಣ ಭರ್ತಿ ಮಾಡಿ ಕೊಂಡಿದ್ದಲ್ಲದೆ, ಇನ್ನೂ ಮುಂದಕ್ಕೆ ಸಾಗಿ 500 ರೂ. ದಾಟಿದೆ.

ಕ್ಯಾಂಪ್ಕೊ ಸಂಸ್ಥೆ 500 ರೂ. ಧಾರಣೆ

ಜಿಗಿದ ರಬ್ಬರ್

ರಬ್ಬರ್ ಬೆಳೆಗಾರರಿಗೆ ಸಿಹಿ ಸುದ್ದಿ ನೀಡಿದೆ. ಳೆದ ಎರಡು ವಾರಗಳಿಂದ ನಿಧಾನವಾಗಿ ಏರುತ್ತಿರುವ ರಬ್ಬರ್ ಧಾರಣೆ ಶುಕ್ರವಾರ 220ರ ಗಡಿ ತಲುಪಿದೆ. ಆರ್‌ಗ್ರೇಡ್ ರಬ್ಬರ್ 212 ರೂ.ಗೆಳಿಗೆ ಏರಿದಿಯಾಗುತ್ತಿದೆ. ಜನವರಿ ಆರಂಭದಲ್ಲಿ 180 ರೂ.ಗೆಳಿಗೆ ಏರಿದಿಯಾಗುತ್ತಿದ್ದ ರಬ್ಬರ್ ಹಂತಹಂತವಾಗಿ ಏರುತ್ತಲೇ ಸಾಗಿ ಈಗ 220.50 ರೂ.ಗೆ ಬಂದಿದೆ.

ನಿಗದಿ ಮಾಡುತ್ತಲೇ ಖಾಸಗಿ ವ್ಯಾಪಾರಸ್ಥರು ಇನ್ನೂ 5 ರೂ. ಹೆಚ್ಚಿಸಿದ್ದಾರೆ. ಪುತ್ತೂರು, ಉಪ್ಪಿನಂಗಡಿ, ಬೆಳ್ಳಾರೆ ಮುಂತಾದ ಕಡೆ 505 ರೂ.ಗೆಳಿಗೆ ಖಾಸಗಿಯವರು ಖರೀದಿ ಮಾಡಿದ್ದಾರೆ.

ಕಾರಣವೇನು?: ಗುಣಮಟ್ಟದ ಅಡಕೆಗಾಗಿ ಕಾಯುತ್ತಿದ್ದ ಉತ್ತರ ಭಾರತದ ವರ್ತಕರು ಅಡಕೆ ಖರೀದಿಸಲು ನಿರುತ್ಸಾಹ ತೋರಿದ್ದರು. ಪ್ರಸ್ತುತ ಏಪ್ರಿಲ್ ಕಾಲಿಟ್ಟಿದ್ದು, ಉತ್ತರ ಭಾರತಕ್ಕೆ ಅಡಕೆ ಸಾಗಾಟ ಹೆಚ್ಚಿಗೊಂಡಿದ್ದು, ಧಾರಣೆ ವೃದ್ಧಿಯಾಗಲು ಕಾರಣವಾಗಿದೆ.

V-karnataka pg 05

Ind Exp pg 05

FKCCI MEET TO FACILITATE FARMER-INDUSTRY LINK

EXPRESS NEWS SERVICE@Bengaluru

THE Federation of Karnataka Chamber of Commerce and Industries (FKCCI), in association with the University of Agricultural Sciences (UAS), is planning to organise its first 'Global Agri-tech Summit 2026' from April 24 to 26 in Bengaluru's Palace Grounds.

FKCCI President Uma Reddy said that the intent of the summit is to connect the farmers with the industries.

"Industry participation is limited to a few products in agriculture. We intend to bridge the gap and bring together farmers, agritech startups, industry leaders, researchers and policymakers on one platform. Farmers have many problems where the industry can pitch in and develop solutions to address them, thereby developing agriculture," Uma Reddy said.



FKCCI presiden Uma Reddy addresses the media on Friday | SHASHIDHAR BYRAPPA

She said the summit will feature advanced technologies like AI, drone-based monitoring, precision farming tools, smart irrigation systems and modern food processing techniques. Uma said that there would be over 200 stalls and that the technologies intend to improve agri efficiency, cut down costs and increase income for the farming community.

UAS Vice-Chancellor Dr S V Suresha said that the farming community need to use technology and said, "There are many developments in agriculture like solar-operated tractors, driverless tractors, drone sprayers, etc., which have minimised the labour needed. At the same time, irrespective of big or small farmers, the farming community is facing problems and that need solutions developed by the industries."

ಏ.24ರಿಂದ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಶೃಂಗಸಭೆ

ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಮತ್ತು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಏ.24 ರಿಂದ 26ರವರೆಗೆ ನಗರದ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಶೃಂಗಸಭೆ 2026 ಆಯೋಜಿಸಲಾಗಿದೆ ಎಂದು ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ ತಿಳಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ದಿನಗಳ ಕಾಲ ನಡೆಯಲಿರುವ ಈ ಶೃಂಗಸಭೆ ರೈತರು, ಕೃಷಿ ಉದ್ಯಮಿಗಳು ಹಾಗೂ ತಂತ್ರಜ್ಞಾನ ತಜ್ಞರಿಗೆ ಮಹತ್ವದ ವೇದಿಕೆಯಾಗಲಿದೆ. ಹೊಸ ತಂತ್ರಜ್ಞಾನ, ನವೀನ ಆವಿಷ್ಕಾರಗಳು, ಕೃಷಿ ಮತ್ತು ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ವ್ಯಾಪಕ ಅವಕಾಶಗಳು, ಹೂಡಿಕೆ ಸಾಧ್ಯತೆಗಳು ಹಾಗೂ ನಾವಿನ್ಯತೆಯ ಉತ್ತೇಜನಕ್ಕೆ ಈ ಸಮ್ಮೇಳನ ದಿಕ್ಕು ತೋರಿಸಲಿದೆ ಎಂದರು.

ಇದಲ್ಲದೆ, ವಿನ್ಯಾಸಕಾರರು, ಸ್ಟಾರ್ಟಪ್‌ಗಳು ಹಾಗೂ ಜಾಗತಿಕ ಖರೀದಿದಾರರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿ, ತಂತ್ರಜ್ಞಾನ ಆಧಾರಿತ ಕೃಷಿಯ ಭವಿಷ್ಯವನ್ನು ರೂಪಿಸುವುದು ಈ ಶೃಂಗಸಭೆಯ ಮುಖ್ಯ ಉದ್ದೇಶವಾಗಿದೆ. ರೈತರಿಗೆ ತಂತ್ರಜ್ಞಾನ ಮತ್ತು ವಾಣಿಜ್ಯದ ಕುರಿತು ಸಮರ್ಪಕ ತಿಳುವಳಿಕೆ ದೊರೆತರೆ ಅವರ ಕೃಷಿ ಅಭಿವೃದ್ಧಿಗೆ ಉತ್ತೇಜನ ಸಿಗುತ್ತದೆ. ಜಾಗತಿಕ ಕೃಷಿ ತಂತ್ರಜ್ಞಾನ ಶೃಂಗಸಭೆ-2026 ಭೂಮಿ, ಬೀಜ, ವಿಜ್ಞಾನ, ಶೃಂಗಸಭೆಯಲ್ಲಿ 200 ಕ್ಕೂ ಹೆಚ್ಚು ಮಳಿಗೆಗಳನ್ನು ಆಯೋಜಿಸಲಾಗಿದ್ದು, ಸುದ್ದಿಗೋಷ್ಠಿಯಲ್ಲಿ ಜಿಕೆವಿಕೆ ಕೃಷಿ ವಿಸ್ತರಣಾ ವಿಭಾಗದ ಮುಖ್ಯಸ್ಥ ಡಾ.ವೈ.ಎನ್. ಶಿವಲಿಂಗಯ್ಯ, ಎಫ್‌ಕೆಸಿಸಿಐ ಉಪಾಧ್ಯಕ್ಷ ಟಿ.ಸಾಯಿರಾಂ ಪ್ರಸಾದ್, ಪ್ರಧಾನ ಕಾರ್ಯದರ್ಶಿ ಎಂ. ಲೋಕ್‌ರಾಜ್ ಇದ್ದರು.



ಏ.24 ರಿಂದ ನಡೆಯಲಿರುವ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಶೃಂಗಸಭೆಯ ಮಾಹಿತಿ ಪುಸ್ತಕವನ್ನು ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಲಾಯಿತು.

ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಹಾಗೂ ಅಕಾಡೆಮಿಕ್ ಮತ್ತು ಇಂಡಸ್ಟ್ರಿ ನಡುವಿನ ಅಂತರವನ್ನು ಕಡಿಮೆ ಮಾಡಲು ಕೃಷಿ ವಿಶ್ವವಿದ್ಯಾನಿಲಯವು ಎಫ್‌ಕೆಸಿಸಿಐ ಜತೆಗೂಡಿ ಗ್ಲೋಬಲ್ ಅಗ್ರಿಟೆಕ್ ಸಮಿಟ್ ಆಯೋಜಿಸಿದೆ. ಕೃಷಿ ಮೇಳದಂತೆ ಲಕ್ಷಾಂತರ ಜನರಿಗೆ ಸಾಮಾನ್ಯ ಅರಿವು ಮೂಡಿಸುವುದಕ್ಕಿಂತ, ತಂತ್ರಜ್ಞಾನಗಳ ಕುರಿತು ಸಂಪೂರ್ಣ ಮಾಹಿತಿ ನೀಡುವ ಉದ್ದೇಶವನ್ನು ಹೊಂದಲಾಗಿದೆ.

-ಡಾ.ಯು.ಎಸ್.ಸುರೇಶ್ , ಕುಲಪತಿ ಜಿಕೆವಿಕೆ

Viswavani Pg 03

Ind Exp Pg 07

Exports up, but earnings down in seafood boom

VISMAY BASU @ New Delhi

INDIA'S seafood exports have surged in volume but weakened in value, caused by a dip in the rate of the seafood internationally. Data placed in the Lok Sabha on April 2, 2026, by the Ministry of Food Processing Industries in reply to a question by Tangella Uday Srinivas (MP, Kakinada) shows exports rising from about 11.5 lakh metric tonnes in 2020–21 to nearly 17.8 lakh metric tonnes in 2023–24, before a slight dip. Export earnings crossed $8 billion at their peak, yet unit prices fell sharply from $5.67 per kg to about $4.14–4.39 per kg, indicating that higher shipments are fetching lower returns.

This divergence comes amid turbulence in India's key export market. The United States, which accounts for roughly a third of India's seafood exports, imposed tariffs of up to 50% in 2025, sharply raising costs and eroding competitiveness. Shipments to the US dropped steeply in the latter half of the year, with some months seeing declines of over 50% year-on-year as buyers shifted to lower-tariff suppliers such as Ecuador. The tariff shock split the export cycle. Volumes held up earlier in the 2025, but prices and orders weakened later as supply chains adjusted. Exporters were forced to cut prices to retain market share, contributing to the fall in unit value even as aggregate quantities remained high. Industry estimates suggest seafood exports could fall by around 20% in adverse conditions, with some shipments to the US projected to decline sharply due to tariff burdens. The tariffs were partially eased to around 18% in early 2026, offering some relief, though the gap with competing countries remains. At home, processing capacity continues to expand. India now has 671 marine fish processing units, with Gujarat and Andhra Pradesh leading, followed by Kerala. These states form the sector's industrial base, while eastern states such as West Bengal and Odisha lag behind.

Government support is channelled through schemes such as the Pradhan Mantri Kisan Sampada Yojana and Production Linked Incentive Scheme for Food Processing Industry. Together, they have supported projects worth over ₹1,800 crore, focusing on cold chains, mechanisation, and value addition. Despite this push, the sector remains tied to bulk exports. The fall in unit prices suggests limited movement up the value chain.



ಬೆಳೆಗಾರರಿಗೆ ಸಂಕಷ್ಟ | ಆಕಾಲಿಕ ಮಳೆ, ಆಲಿಕಲ್ಲು, ಉಷ್ಣಾಂಶ ಇಳಿಕೆಯಿಂದ ಮಾವಿನ ಮಿಡಿಗಳು ಹಾನಿ | ಬಾದಾಮಿ ಈ ಬಾರಿ ಬಲು ದುಬಾರಿ

ಹವಾಮಾನ ವೈಪರಿತ್ಯಕ್ಕೆ ಮಾವು ಫಸಲು ಶೇ.50 ಕುಸಿತ!

• ಸಂಪತ್ ತರೀಕೆರೆ
ಕನ್ನಡಪ್ರಭ ವಾರ್ತೆ ಬೆಂಗಳೂರು

ರಾಜ್ಯದಲ್ಲಿ ತೀವ್ರವಾದ ಒಣ ವಾತಾವರಣ, ಚಳಿ ಹಾಗೂ ಅಧಿಕ ಚಳಿ ಮತ್ತು ಆಲಿಕಲ್ಲು ಮಳೆಯಿಂದಾಗಿ ಈ ವರ್ಷ ಮಾವಿನ ಉತ್ಪಾದನೆಯಲ್ಲಿ ಶೇ.50-60ರಷ್ಟು ಕುಸಿತವಾಗಿದೆ.



ಪರಿಣಾಮ ಬಂಪರ್ ಬೆಳೆಯ ನಿರೀಕ್ಷೆಯಲ್ಲಿದ್ದ ಮಾವು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಲಿದ್ದು, ಮಾವು ಪ್ರಿಯರಿಗೂ ಬಿಸಿ ತಟ್ಟಲಿದೆ..!

ಡಿಸೆಂಬರ್ ಕೊನೆಯ ವಾರದಲ್ಲಿ ರಾಮನಗರ, ಧಾರವಾಡ ಸೇರಿದಂತೆ ಇತರೆ ಜಿಲ್ಲೆಗಳಲ್ಲಿ ಮಾವು ಹೂವು ಬಿಡಲು ಆರಂಭಿಸಿತ್ತು. ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಸುತ್ತಮುತ್ತಲ ಕಡೆಗಳಲ್ಲಿ ಜನವರಿ ಅಂತ್ಯ ಮತ್ತು ಫೆಬ್ರವರಿಯಲ್ಲಿ ಹೂವು ಬಿಡುವ ಪ್ರಕ್ರಿಯೆ ಉತ್ತಮವಾಗಿತ್ತು. ಈ ಹಿನ್ನೆಲೆಯಲ್ಲಿ ಈ ವರ್ಷ 'ಏರು ಹಂಗಾಮು' ಇರಲಿದೆ ಎಂದು ಅಂದಾಜಿಸಲಾಗಿತ್ತು.

ಆದರೆ, ಅಧಿಕ ಚಳಿ, ತೀವ್ರ ಒಣ ವಾತಾವರಣ ಮತ್ತು ಕಳೆದ ಎರಡ್ಮೂರು ವಾರಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸುರಿದ ಆಲಿಕಲ್ಲು ಮಳೆಯಿಂದಾಗಿ ಮಾವು ಬೆಳೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಇದರಿಂದಾಗಿ ಬಿಟ್ಟಿರುವ ಹೂವು ನಿರೀಕ್ಷೆಯಂತೆ ಕಾಯಿ ಕಚ್ಚುವಲ್ಲಿ ಸಫಲವಾಗಿಲ್ಲ. ಅನೇಕ ಕಡೆಗಳಲ್ಲಿ ಆಲಿಕಲ್ಲು ಮಳೆಯಿಂದ ನೂರಾರು ಹೆಕ್ಟೇರ್ ಪ್ರದೇಶದಲ್ಲಿ ಮಾವಿನ ಮಿಡಿಗಳು ಹಾನಿಗೊಳಗಾಗಿವೆ. ಇದು ಮಾವು ಉತ್ಪಾದನೆ ಕುಸಿಯಲು ಕಾರಣವಾಗಿದೆ.

ಮಾವುಅಭಿವೃದ್ಧಿಮತ್ತುಮಾರಾಟ ಮಂಡಳಿ ಪ್ರಕಾರ ಜನವರಿ ಮತ್ತು ಫೆಬ್ರವರಿಯಲ್ಲಿ ಉಷ್ಣಾಂಶ, ಮಾವು ಬೆಳೆಗೆ ಅಗತ್ಯವಿರುವ ಉಷ್ಣಾಂಶಕ್ಕಿಂತ ತೀರಾ ಕಡಿಮೆ ಮಟ್ಟಕ್ಕೆ ಇಳಿದು ಹೂ ಗೊಂಚಲಿನಲ್ಲಿ ಹರ್ಮಾಫ್ರೋಡಿಟ್ ಫ್ಲವರ್ಸ್ (ಉಭಯಲಿಂಗಿ ಹೂವು) ಸಂಖ್ಯೆ ತೀರ ಕಡಿಮೆಯಿದ್ದು ಗಂಡು ಹೂವುಗಳೇ ಹೆಚ್ಚಿನ ಪ್ರಮಾಣದಲ್ಲಿದ್ದವು. ಇದರಿಂದ ಸಹಜವಾಗಿ ಕಾಯಿಕಚ್ಚುವ ಪ್ರಮಾಣ ಶೇ.20ರಷ್ಟು ಕಡಿಮೆಯಾಗಿದೆ. ಈ ಕಾರಣದಿಂದ ರಾಜ್ಯದಲ್ಲಿನ ಎಲ್ಲಾ ಮಾವು ಬೆಳೆಗಳಲ್ಲಿ ಬಾದಾಮಿ ತಳಿಗಳಲ್ಲಿ ಕಾಯಿಕಚ್ಚುವಪ್ರಮಾಣ ಅತ್ಯಲ್ಪವಾಗಿದೆ ಎಂದು ಹೇಳಿದೆ.

ಇಳುವರಿ ಕುಸಿತ: ಈ ಬಾರಿಯ ಮಾವು ಹಂಗಾಮಿನ ಆರಂಭದಲ್ಲಿ 14ರಿಂದ 16 ಲಕ್ಷ ಮೆಟ್ರಿಕ್ ಟನ್ ಮಾವು ಉತ್ಪಾದನೆಯಾಗಲಿದೆ ಎಂದು ಅಂದಾಜಿಸಲಾಗಿತ್ತು. ಹಾಗಾಗಿ ಮಾವು ಬೆಳೆಗಾರರು ಸಂತಸದಲ್ಲಿದ್ದರು. ಆದರೆ ಹವಾಮಾನ ವೈಪರೀತ್ಯದಿಂದಾಗಿ ಮಾವು ಬೆಳೆಯ ಶಾರೀರಿಕ ಸ್ಥಿತ್ಯಂತರದಲ್ಲಿ ಭಾರಿ ಬದಲಾವಣೆ ಉಂಟಾಗಿದೆ. ಹೀಗಾಗಿ ಶೇ.50ರಿಂದ 60ರಷ್ಟು ಫಸಲು ಕುಂಟಿತವಾಗಲಿದೆ. ಹಾಗಾಗಿ ಈ ವರ್ಷ 'ಇಳಿ ಹಂಗಾಮು' ಆಗಲಿದ್ದು, ಮಾವಿನ ಫಸಲಿನ ಒಟ್ಟಾರೆ ಪ್ರಮಾಣ 6 ರಿಂದ 7 ಲಕ್ಷ ಮೆಟ್ರಿಕ್ ಟನ್ ಆಗಲಿದೆ ಎಂದು ಅಂದಾಜಿಸಲಾಗಿದೆ.

1.48 ಲಕ್ಷ ಹೆಕ್ಟೇರ್‌ನಲ್ಲಿ ಮಾವು: ರಾಜ್ಯದಲ್ಲಿ 1.48 ಲಕ್ಷ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಏರು ಹಂಗಾಮಿನಲ್ಲಿ ಸರಾಸರಿ 14ರಿಂದ 16 ಲಕ್ಷ ಮೆಟ್ರಿಕ್ ಟನ್ ಮಾವು ಇಳುವರಿ ಸಿಗುತ್ತದೆ. ಇಳಿ ಹಂಗಾಮಿನಲ್ಲಿ 6 ರಿಂದ 9 ಲಕ್ಷ ಮೆಟ್ರಿಕ್ ಟನ್ ಮಾವು ಉತ್ಪಾದನೆಯಾಗುತ್ತದೆ. ರಾಜ್ಯದಲ್ಲಿ ಮಾವು ಬೆಳೆಯುವ ಒಟ್ಟು 1.48 ಲಕ್ಷ ಹೆಕ್ಟೇರ್ ಪೈಕಿ ಕೋಲಾರ 45,568, ರಾಮನಗರ 27,722, ತುಮಕೂರು 16,616, ಬೆಳಗಾವಿ 2908, ಚಿಕ್ಕಬಳ್ಳಾಪುರ 9572, ಹಾವೇರಿ 4434, ಮಂಡ್ಯದಲ್ಲಿ 1806, ಚಿಕ್ಕಮಗಳೂರಲ್ಲಿ 1101 ಹೆಕ್ಟೇರ್‌ನಲ್ಲಿ ಮಾವು ಬೆಳೆಯಲಾಗುತ್ತಿದೆ.

ಬಾದಾಮಿ 80% ಕುಸಿತ

ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಕಾಯಿ ಕಚ್ಚಿರುವ ಸರಾಸರಿ ಪ್ರಮಾಣದಲ್ಲಿ ಬಾದಾಮಿ ಶೇ.10-15, ಮಲ್ಲಿಕಾ ಶೇ.50-60, ತೋತಾಪುರಿ, ನೀಲಂ, ಕೇಸರ್ ತಲಾ ಶೇ.60-70, ಸೆಂದೂರು, ರಸಪುರಿ ತಲಾ ಶೇ.50-60 ಮತ್ತು ಬೇನಿಶಾ ಶೇ.40-50ರಷ್ಟು ಮಾತ್ರ ಕಾಯಿಕಚ್ಚಲಿವೆ ಎಂದು ಮಾವು ಅಭಿವೃದ್ಧಿ ಮಂಡಳಿ ಮಾಹಿತಿ ನೀಡಿದೆ.

ಆಕಾಲಿಕ ಮಳೆ ಹೊಡೆತ

ಮಾರ್ಚ್‌ನಲ್ಲಿ ಸಂಭವಿಸಿದ ಭಾರೀ ಆಲಿಕಲ್ಲು ಮಳೆ ಮತ್ತು ಆಕಾಲಿಕ ಮಳೆ ರಾಜ್ಯದ ಹಲವು ಭಾಗಗಳನ್ನು ತೀವ್ರ ಬಾಧಿಸಿದೆ. ಹಲವು ಬೆಳಗಳ ಹಾನಿಗೆ ಕಾರಣವಾಗಿದೆ. ಈ ಹಾನಿಯಲ್ಲಿ ಮಾವಿನ ಬೆಳೆಗೂ ದೊಡ್ಡ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ.

• **ಟಿ.ಆರ್. ವೇದಮೂರ್ತಿ** ಎಂಡಿ, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ.

Kannadaprabha Pg 07

ರೈತರಿಂದ 2227 ತಳಿಗಳ ಸಂಗ್ರಹ | ಸರ್ಕಾರದಿಂದ 490 ರೈತರಿಗೆ ಪ್ರೋತ್ಸಾಹಧನ

Hosadiganta pg 06

ದೇಸಿ ತಳಿ ಸಂರಕ್ಷಣೆಗೆ ಕೃಷಿ ಇಲಾಖೆ ಉತ್ತೇಜನ

▸ ದೇವಿತಾ.ಪಿ.ಎಸ್

• **ಬೆಂಗಳೂರು:** ದೇಸಿ ಬೆಳೆ ತಳಿಗಳ ಸಂರಕ್ಷಣೆ ಹಾಗೂ ಪುನರುಜ್ಜೀವನಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಕೃಷಿ ಇಲಾಖೆ ಯು ಆರಂಭಿಸಿದ್ದ, ದೇಸಿ ತಳಿಗಳ ಸಂರಕ್ಷಣೆ ಹಾಗೂ ಉತ್ತೇಜನ ಕಾರ್ಯಕ್ರಮಕ್ಕೆ ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಹವಾಮಾನ ಬದಲಾವಣೆ ಮತ್ತು ರಾಸಾಯನಿಕ ಕೃಷಿ ಹೆಚ್ಚುತ್ತಿರುವ ಪರಿಣಾಮಗಳ ನಡುವೆಯೂ ದೇಸಿ ಬೆಳೆ ತಳಿಗಳು ಹೆಚ್ಚು ಸಹನಶೀಲತೆ ಹಾಗೂ ಪೌಷ್ಟಿಕ ಗುಣಗಳನ್ನು ಹೊಂದಿರುವ ಹಿನ್ನೆಲೆಯಲ್ಲಿ, ಅವುಗಳ ಉತ್ತೇಜನಕ್ಕೆ ಕೃಷಿ ಇಲಾಖೆಯು ವಿಶೇಷ ಆದ್ಯತೆ ನೀಡುತ್ತಿದೆ. ಈ ನಿಟ್ಟಿನಲ್ಲಿ ದೇಸಿ ತಳಿಗಳ ಸಂರಕ್ಷಣೆ ಹಾಗೂ ಉತ್ತೇಜನ ಕಾರ್ಯಕ್ರಮದಡಿ, ಇಲ್ಲಿಯವರೆಗೆ ಒಟ್ಟು 609 ರೈತರಿಂದ 2227 ತಳಿಗಳನ್ನು ಸಂರಕ್ಷಿಸಲಾಗಿದ್ದು, ಮೊದಲನೆ ಹಂತದ ಮೌಲ್ಯಮಾಪನವನ್ನು ಪೂರ್ಣಗೊಳಿಸಲಾಗಿದೆ.



ಇಂದಿನ ದಿನಗಳಲ್ಲಿ ಬರುತ್ತಿರುವ ಅಧಿಕ ಇಳುವರಿ ತಳಿಗಳಿಂದಾಗಿ ದೇಸಿ ತಳಿಗಳು ನಶಿಸಿ ಹೋಗುತ್ತಿವೆ. ಆದ್ದರಿಂದ ನಮ್ಮ ತಳಿಗಳ ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರವನ್ನು ಆರಂಭಿಸಲಾಗಿದ್ದು, ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.
■ **ಡಾ.ಜೆ.ಟಿ.ಪುತ್ರ, ನಿರ್ದೇಶಕ**

ಇಲಾಖೆ ಕಳೆದ ವರ್ಷದ ಏಪ್ರಿಲ್-ಮೇ ತಿಂಗಳಲ್ಲಿ ದೇಸಿ ತಳಿಗಳನ್ನು ಸಂಗ್ರಹಿಸಲು ಆರಂಭಿಸಿತ್ತು. ಸಂಗ್ರಹಿತ ತಳಿಗಳ 20 ಬೆಳೆಗಳನ್ನು 8 ಆಯ್ದ ಸ್ಥಳಗಳಲ್ಲಿ ಈಗಾಗಲೇ ಬೆಳೆಯಲಾಗಿದೆ. 15 ಮಂದಿ ವಿಜ್ಞಾನಿಗಳ ತಂಡ ಪ್ರಾಯೋಗಿಕವಾಗಿ ಬೆಳೆದು ಅವುಗಳ ಗುಣಲಕ್ಷಣಗಳು, ಪೌಷ್ಟಿಕಾಂಶಗಳ ಮೌಲ್ಯಮಾಪನ ಕಾರ್ಯ ಕೈಗೊಳ್ಳಲಾಗುತ್ತದೆ. ನಂತರ ಇವುಗಳನ್ನು ಶುದ್ದೀಕರಿಸಿ, ಎರಡನೇ ಹಂತದ ಬೆಳೆಯನ್ನು ಶೀಘ್ರದಲ್ಲೇ ಬೆಳೆಯಲಾಗುತ್ತದೆ. ಇದಾದ ಬಳಿಕ ಯಾವ ತಳಿಗಳು ನಕಲಿ ಎಂಬುದು ಪತ್ತೆಹಚ್ಚಿ ಜೀನೊಮಿಕ್ ಅಧ್ಯಯನ ಮತ್ತು ಪೋಷಕಾಂಶಗಳ ಗುಣಗಳನ್ನು ಮೌಲೀಕರಿಸಲಾಗುತ್ತದೆ.

ಕೆ-ಕಿಸಾನ್ ಆ್ಯಪ್ ಮೂಲಕ ಹೆಸರು ನೋಂದಣಿ

ಬೆಂಗಳೂರಿನ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಜಿಕೆವಿಕೆಯಲ್ಲಿ (ಯುಎಎಸ್) ಬೀಜ ಬ್ಯಾಂಕ್ ಸ್ಥಾಪಿಸಲಾಗಿದೆ. ಅಳಿವಿನ ಅಂಚಿನಲ್ಲಿರುವ ಸಾಂಪ್ರದಾಯಿಕ ತಳಿಗಳಾದ ಭತ್ತ, ರಾಗಿ, ಜೋಳ, ಹೆಸರುಕಾಳು, ತೊಗರಿ, ಉದ್ದು ಸೇರಿದಂತೆ ಇತರ ಸ್ಥಳೀಯ ಧಾನ್ಯಗಳನ್ನು ಸಂರಕ್ಷಿಸಲಾಗುತ್ತಿದೆ. ರೈತರು ಈಗಲೂ ತಮ್ಮ ಬಳಿ ಇರುವ ಪುರಾತನ ದೇಸಿ ತಳಿಗಳನ್ನು ಕೃಷಿ ಇಲಾಖೆಯ ಕೆ-ಕಿಸಾನ್ ಆ್ಯಪ್ ಮೂಲಕ ಹೆಸರು ನೋಂದಾಯಿಸಿಕೊಂಡು, ಇಲಾಖೆಗೆ ದೇಸಿ ತಳಿಗಳನ್ನು ಕೊಡಬಹುದಾಗಿದೆ. ನಂತರ ತಳಿಗಳಲ್ಲಿನ ಬೆಳವಣಿಗೆಯನ್ನು ಗುರುತಿಸಿ ರೈತರಿಗೆ ಪ್ರೋತ್ಸಹ ಧನವನ್ನು ನೀಡಲಾಗುತ್ತಿದ್ದು, ಇಲ್ಲಿಯವರೆಗೆ ಒಟ್ಟು 490 ರೈತರಿಗೆ ಪ್ರೋತ್ಸಾಹಧನ ನೀಡಲಾಗಿದೆ.

609 ರೈತರಿಂದ ಸಂಗ್ರಹ: ಉತ್ತರ ಕನ್ನಡ, ಮಂಡ್ಯ, ಬೆಳಗಾವಿ, ದಕ್ಷಿಣ ಕನ್ನಡ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ರೈತರಿಂದ ಭತ್ತ, ರಾಗಿ, ಜೋಳ, ತೊಗರಿ, ಹುರುಳಿ, ಅವರೆ, ಅಲಸಂದೆ, ಮಡಕಕಾಳು, ಹುಚ್ಚೆಳ್ಳು, ಕುಸುಬೆ, ಎಳ್ಳು, ನವಣೆ, ಸಾಮೆ, ಊದಲು, ಕೊರಲೆ, ಹಾರಕ, ಬರಗು, ಗೋಧಿ, ಮೆಣಸಿನಕಾಯಿ, ಮೆಕ್ಕೆ ಹುಚ್ಚೆಳ್ಳು, ಗೋರಿ, ಮೆಣಸಿನಕಾಯಿ ಹೀಗೆ ನಾನಾ 2200ಕ್ಕೂ ಹೆಚ್ಚು ತಳಿಗಳನ್ನು 609 ಕ್ಕೂ ಹೆಚ್ಚು ರೈತರಿಂದ ಸಂಗ್ರಹಿಸಲಾಗಿದೆ.

Udayavani pg 07

ಯೂರಿಯಾ ಗೊಬ್ಬರ ಅಕ್ರಮ ಮಾರಾಟ ತಡೆಗೆ ಆ್ಯಪ್

ಕೊರತೆ ನೀಗಿಸಲು ಕೃಷಿ ಇಲಾಖೆ ಸಜ್ಜು | ಮುಂಗಾರು ಹಂಗಾಮಿಗೆ ಸಿದ್ಧತೆ | ಅಕ್ರಮ ಬಳಕೆ ತಡೆಗೆ ರಾಜ್ಯ, ಜಿಲ್ಲಾ ಮಟ್ಟದ ಸಮಿತಿ ರಚನೆ

ಪ್ರಸ್ತುತ 28224 ಮೆ.ಟನ್ ಗೊಬ್ಬರ ದಾಸ್ತಾನು | ಅನಧಿಕೃತ ಸಾಗಣೆ ತಡೆಗೆ ಗಡಿಗಳಲ್ಲಿ ನಿಗಾ | ರಿಯಾಯ್ತಿ ದರದಲ್ಲಿ ಸಾವಯವ ಗೊಬ್ಬರ

■ **ಉದಯವಾಣಿ ಸಮಾಚಾರ**

ಬೆಂಗಳೂರು: 2026ರ ಮುಂಗಾರು ಹಂಗಾಮಿನ ರಸಗೊಬ್ಬರಗಳ ಸಮರ್ಪಕ ಪೂರೈಕೆ ಮತ್ತು ಪರಿಣಾಮಕಾರಿ ನಿರ್ವಹಣೆ ಜತೆಗೆ ರಸಗೊಬ್ಬರಕ್ಕೆ ಕೊರತೆ ಉಂಟಾಗದಂತೆ ಕೃಷಿ ಇಲಾಖೆಯು ಹಲವು ಕ್ರಮಗಳನ್ನು ಕೈಗೊಂಡಿದೆ. ಅಲ್ಲದೆ, ಗೊಬ್ಬರ ಕಾಳಸಂತೆಯಲ್ಲಿ ಮಾರಾಟ ತಡೆಗೆ ಕೃಷಿ ಇಲಾಖೆ ಕಡಿವಾಣ ಹಾಕಿದ್ದು, ಇನ್ನುಂದೆ ಆ್ಯಪ್ ಮೂಲಕವೇ ಯೂರಿಯಾ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

ಮಧ್ಯಪ್ರಾಚ್ಯ ಪ್ರದೇಶದ ಆಮದಿನ ಹಿನ್ನೆಲೆಯಲ್ಲಿ ಗೊಬ್ಬರ ಉತ್ಪಾದನೆಗೆ ಅಗತ್ಯವಿರುವ ಕಚ್ಚಾ ವಸ್ತುಗಳ ಆಮದು ವ್ಯತ್ಯಯವಾಗುವ ಸಾಧ್ಯತೆ ಕಂಡುಬಂದಿದ್ದು, ರಾಜ್ಯದಲ್ಲಿಗೊಬ್ಬರಪೂರೈಕೆಗೆಅಡ್ಡಿಯಾಗುವ ಆತಂಕ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ ಅವರ ಉಸ್ತುವಾರಿಯಲ್ಲಿ ಇಲಾಖೆ ಹಲವು ಕ್ರಮಗಳನ್ನು ಕೈಗೊಂಡಿದೆ.



ಆ್ಯಪ್ ಮೂಲಕ ನಿಯಂತ್ರಿತ ವಿತರಣೆ

- ಇದುವರೆಗೆ ರಾಜ್ಯದಲ್ಲಿ 30.05 ಲಕ್ಷ ಮೆಟ್ರಿಕ್ ಟನ್ ಗೊಬ್ಬರ ಹಂಚಿಕೆ
- ಪ್ರಸ್ತುತ ರಾಜ್ಯದಲ್ಲಿ 11.42 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಸಂಗ್ರಹ
- 28224 ಮೆಟ್ರಿಕ್ ಟನ್ ಕಾಪು ದಾಸ್ತಾನು ಲಭ್ಯ
- ಯೂರಿಯಾ ಮತ್ತು ಡಿ.ಎ.ಪಿ 25% ಕಡ್ಡಾಯ ಸಂಗ್ರಹ
- ಯೂರಿಯಾ ಡಿಸ್ಟ್ರಿಬ್ಯೂಷನ್ ಆ್ಯಪ್ ಮೂಲಕ ನಿಯಂತ್ರಿತ ವಿತರಣೆ
- 8 ಜಿಲ್ಲೆಗಳಲ್ಲಿದ್ದ ಈ ಪೈಲೆಟ್ ಯೋಜನೆ ರಾಜ್ಯಾದ್ಯಂತ ವಿಸ್ತರಣೆ
- ಅಕ್ರಮ ಬಳಕೆ ತಡೆಗೆ ಜಿಲ್ಲಾ ಸಮಿತಿಗಳು
- ಗಡಿ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ನಿಗಾ
- ವಸುಧಾಮೃತ ಯೋಜನೆಯಡಿ ಜೈವಿಕ ಗೊಬ್ಬರ ವಿತರಣೆ
- ರೈತರಿಗೆ ಸಮತೋಲಿತ ಗೊಬ್ಬರ ಕುರಿತು ಜಾಗೃತಿ

ಕೇಂದ್ರ ಸರ್ಕಾರವು ರಾಜ್ಯಕ್ಕೆ ಒಟ್ಟು 30.05 ಲಕ್ಷ ಮೆಟ್ರಿಕ್ ಟನ್ ವಿವಿಧ ಗೊಬ್ಬರಗಳನ್ನು ಹಂಚಿಕೆ ಮಾಡಿದ್ದು, ಏಪ್ರಿಲ್ 1ರ ವೇಳೆಗೆ 11.42 ಲಕ್ಷ ಮೆಟ್ರಿಕ್ ಟನ್ ಸಂಗ್ರಹ ಲಭ್ಯವಿದೆ. ಪ್ರಸ್ತುತ 28224 ಮೆಟ್ರಿಕ್ ಟನ್ ಗೊಬ್ಬರ ದಾಸ್ತಾನು ಲಭ್ಯವಿದ್ದು, ಯೂರಿಯಾ ಮತ್ತು ಡಿ.ಎ.ಪಿ ಗೊಬ್ಬರ ಶೇ.25ರಷ್ಟು ಕಡ್ಡಾಯವಾಗಿ ಸಂಗ್ರಹಿಸಲು ನಿರ್ದೇಶಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಜಿಲ್ಲಾವಾರು ಗೊಬ್ಬರ ಹಂಚಿಕೆ ಕಳೆದ 3 ವರ್ಷಗಳ ಸರಾಸರಿ ಬಳಕೆ ಆಧರಿಸಿ, ಮರು ನಿರ್ಧಾರ ಮಾಡಲಾಗಿದೆ. ಜೊತೆಗೆ ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸೂಕ್ಷ್ಮ ಯೋಜನೆ ರೂಪಿಸಿ ಪೂರೈಕೆ ಸಮತೋಲನ ಕಾಯ್ದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಪ್ರತಿ ವಾರ ಸಭೆ: ಅಂತಾರಾಜ್ಯ ಗಡಿಗಳಲ್ಲಿ ಚೆಕ್‌ಪೋಸ್ಟ್‌ಗಳ ಮೂಲಕ ಯೂರಿಯಾ ಅನಧಿಕೃತ ಸಾಗಣೆ ತಡೆಗೆ ನಿಗಾ, ಜತೆಗೆ ಪ್ರತಿ ವಾರ ವಿಡಿಯೋ ಕಾನ್ಫರೆನ್ಸ್ ಸಭೆಗಳ ಮೂಲಕ ಗೊಬ್ಬರ ಪೂರೈಕೆ, ಮಾರಾಟ ಮತ್ತು ಸಂಗ್ರಹ ಸ್ಥಿತಿ ಮೇಲ್ವಿಚಾರಣೆ ಮಾಡಲಾಗುತ್ತದೆ ಎಂದು ತಿಳಿಸಿದೆ.

ರಾಜ್ಯದಲ್ಲಿ ಯೂರಿಯಾ ಬಳಕೆಯನ್ನು ನಿಯಂತ್ರಿಸಲು ಫುಟ್ಸ್ (ಫಾರ್ಮರ್ ರಿಜಿಸ್ಟ್ರೇಷನ್ ಅಂಡ್ ಯೂನಿಫೈಡ್ ಬೆನಿಫಿಷರಿ ಇನ್ಫಾರ್ಮೇಷನ್ ಸಿಸ್ಟಮ್) ಡೇಟಾ ಬೇಸ್ ಆಧಾರಿತ ಯೂರಿಯಾ ಡಿಸ್ಟ್ರಿಬ್ಯೂಷನ್ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ರೈತರ ಭೂ ಹಿಡುವಳಿ ಮತ್ತು ಬೆಳೆ ಮಾದರಿಯನ್ನು ಆಧರಿಸಿ ಯೂರಿಯಾ ಮಾರಾಟ ನಿಯಂತ್ರಿಸಲಾಗುತ್ತಿದೆ. ಈ ಆಪ್ಲಿಕೇಷನ್ ಈಗಾಗಲೇ 8 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಯಲ್ಲಿದೆ.

ಕೃಷಿ ಹೊರತಾದ ಕೃಷಿ ಚಟುವಟಿಕೆಗೆ ಸಹಾಯಧನದ ಯೂರಿಯಾ ಮರುಬಳಕೆಗೆ ತಡೆಯಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ವಿಶೇಷ ಸಮಿತಿ ರಚನೆಯಾಗಿದೆ. 'ವಸುಧಾಮೃತ' ಯೋಜನೆಯಡಿ ರೈತರಿಗೆ ರಿಯಾಯಿತಿ ದರದಲ್ಲಿ ಸಾವಯವ ಹಾಗೂ ಜೈವಿಕ ಗೊಬ್ಬರ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

Farmer reaps ₹2L compensation after crop failure

Vindhya.Pabolu
@timesofindia.com

Bengaluru: After quitting his job as a lecturer to take up farming, 31-year-old Nagesh M Bin's hopes of a bumper cucumber harvest were crushed. He blamed defective seeds and approached Bangalore Urban II Additional District Consumer Disputes Redressal Commission. The commission ruled in his favour by ordering the firm to pay him about Rs 2.2 lakh.

Lecturer-turned farmer Nagesh said he spent around ₹1.1 lakh on cultivation, including land preparation, manure, labour, tractor rent, bed preparation, bamboo supports, irrigation materials, fertilisers and insecticides. Under normal conditions, he claimed, the crop would have yielded 33,000-38,000kg, fetching about ₹3.2 lakh



SEEDS OF TROUBLE

Nagesh, from Doddamaranahalli in Bengaluru South taluk, quit his job at his parents' insistence to take up agriculture. His family is fully dependent on farm income for its livelihood.

He decided to cultivate cucumbers on one acre of his land and approached Shri Gangadhareshwar Traders in Tavarekere, where the dealer recommended Suvarna Hybrid Seeds Pvt Ltd's F-1 Hybrid Shanthi cucumber. He bought five packets for Rs 1,750 on July 19, 2023, and sowed them the same day. At the same time, he also got two packets and sowed IVIZ seeds for Chitra cucumber.

Trouble surfaced early, with poor germination and stunted growth of Shanthi cucumber. The eventual yield was inferior in size, shape and colour. When Nagesh raised concerns, the dealer directed him to the producer. Company representatives visited the field, inspected his crop, took photographs and assured him the issue would be escalated.

A subsequent visit by another representative, accompanied by a person introduced as a scientist, led to assurances that compensation would be considered.

On Nov 9, 2023, another company representative contacted Nagesh and offered 50 seed packets worth Rs 15,000 as compensation. The same day, Nagesh filed a written complaint with the senior assistant director of horticulture, Bengaluru South, prompting an official inspection of the field.

Nagesh said he spent around Rs 1.1 lakh on cultivation, including land preparation, manure, labour, tractor rent, bed preparation, bamboo supports, irrigation materials, fertilisers and insecticides. Under normal conditions, he claimed, the crop would have yielded 33,000-38,000kg, fetching about Rs 3.2 lakh. Alleging defective seeds and deficiency in service, he approached the commission on Nov 29, 2023.

In its defence, the producer alleged poor agricultural practices led to the low yield. The producer also argued that no seed samples were submitted for scientific testing and that poor yield alone does not establish a defect. The company contended that the report did not conclusively prove inferior seeds and that inspection after over 70 days made findings unreliable.

The commission relied on the horticulture department's spot inspection report. It noted that two varieties — Shanthi and Chitra — were grown under identical conditions, including drip irrigation and fertiliser use. While the Chitra crop yielded good produce, Shanthi variety showed poor germination, irregular shape, dark colour and low yield.

The commission acknowledged delays in inspection but held that evidence, including photographs and records, supported the farmer's claims. It observed the company too had failed to produce batch samples for verification. On March 3, 2026, the bench, comprising president Vijaykumar M Pawale and member Anuradha V, held the trader and manufacturer guilty of deficiency in service. It directed them to pay Rs 2 lakh as compensation, along with Rs 10,000 for mental agony and Rs 5,000 towards litigation costs.

Times of Ind pg 04

ರ್‍ಯಾಕ್‌ನಲ್ಲಿದ್ದ ಒಣದ್ರಾಕ್ಷಿಗಾಳಿ, ಮಳೆಗೆ ಹಾಳು | ಗಿಡದಲ್ಲಿರುವ ಫಸಲಿಗಷ್ಟೇ ಬೆಳೆ ವಿಮೆ ಎಂದು ಜಾರಿಕೊಳ್ಳುತ್ತಿರುವ ಕಂಪನಿ

ಆಲಿಕಲ್ಲು ಮಳೆಗೆ ನುಗ್ಗಾದ ಒಣದ್ರಾಕ್ಷಿ, ರೈತ ಕಂಗಾಲು

■ ಮಂಜುನಾಥ ಕೊಣಸೂರು
ವಿಜಯಪುರ
manjunatha.kp@timesofindia.com

ಮುಂದುವರಿದ ಅಕಾಲಿಕ ಮಳೆ, ಗಾಳಿಗೆ ಜಿಲ್ಲೆಯ ತಿಕೋಟಾ, ನಾಗಠಾಣ ಭಾಗದಲ್ಲಿ ರ್‍ಯಾಕ್‌ನಲ್ಲಿದ್ದ ಒಣದ್ರಾಕ್ಷಿ ಅಪಾರ ಪ್ರಮಾಣದಲ್ಲಿ ಹಾಳಾಗಿದೆ. ಗುರುವಾರವೂ ಸುರಿದ ಮಳೆಯಿಂದ ಒಣದ್ರಾಕ್ಷಿ ಉತ್ಪಾದನೆಯ ಶೆಡ್‌ಗಳು ಹಾಳಾಗಿವೆ.

ರ್‍ಯಾಕ್‌ನಲ್ಲಿದ್ದ ಫಸಲು ಒಣಗುವ ಬದಲು ಮಳೆಯಿಂದಾಗಿ ಅದರೊಳಗೆ ತೇವಾಂಶ ಸೇರಿಕೊಂಡು ಗುಣಮಟ್ಟ ಕೆಟ್ಟಿದ್ದು, ರೈತರಿಗೆ ಹೆಚ್ಚಿನ ಹಾನಿಯಾಗಿದೆ. ಬೆಳೆ ವಿಮೆ ಮಾಡಿಸಿದರೂ ಕಂಪನಿಯವರ ಮೊಂಡಾಟದಿಂದ ಬೆಳೆಗಾರರಿಗೆ ಸಂಕಷ್ಟ ಎದುರಾಗಿದೆ.

ವಾರದ ಹಿಂದೆಯಷ್ಟೇ ಅಕಾಲಿಕ ಆಲಿಕಲ್ಲು ಮಳೆ ಸುರಿದು ಗಿಡದಲ್ಲಿರುವ ದ್ರಾಕ್ಷಿ ಹಾಗೂ ಒಣದ್ರಾಕ್ಷಿ ತಯಾರಿಕೆಗೆ ಶೆಡ್‌ನಲ್ಲಿ ಹಾಕಿದ್ದ ಫಸಲು ನೆಲಕ್ಕುರುಳಿತ್ತು. ಕಳೆದೆರಡು ದಿನಗಳಿಂದ ಮತ್ತೆ ಅಕಾಲಿಕ ಮಳೆ ಸುರಿದು ತಿಕೋಟಾ ಭಾಗದಲ್ಲಿ



ವಿಜಯಪುರ ಜಿಲ್ಲೆಯಲ್ಲಿ ಅಕಾಲಿಕ ಮಳೆಯಿಂದ ನೆಲಕ್ಕುರುಳಿದ ಒಣದ್ರಾಕ್ಷಿ ತಯಾರಿಕೆ ಘಟಕ.

ಒಣದ್ರಾಕ್ಷಿ ತಯಾರಿಕೆ ಶೆಡ್‌ಗಳ ಪತ್ರಾಸ್, ಶೆಡ್‌ನೆಟ್ ಹಾರಿಹೋಗಿವೆ. ಅದರಲ್ಲಿಯ ಉತ್ಪನ್ನಕ್ಕೆ ನೀರು ಸೇರಿಕೊಂಡು ಹಾಳಾಗಿದೆ. ವಿಜಯಪುರ ತಾಲೂಕಿನ ನಾಗಠಾಣ, ಜಮಖಂಡಿ ತಾಲೂಕಿನ ಸಾವಳಗಿ, ಅಥಣಿ ಭಾಗದಲ್ಲೂ ಒಣದ್ರಾಕ್ಷಿ ಅಕಾಲಿಕ ಮಳೆಗೆ ಹಾಳಾಗಿದೆ.

ವಾರದ ಹಿಂದೆ ಸುರಿದ ಅಕಾಲಿಕ ಆಲಿಕಲ್ಲು ಮಳೆಯಿಂದಾಗಿ ಬೆಳೆ ಹಾನಿ ಬಗ್ಗೆ ತಕ್ಷಣ ಸಮೀಕ್ಷೆ ಕೈಗೊಂಡು ವರದಿ ನಲ್ಲಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹಾಗೂ ಜಿಲ್ಲಾಧಿಕಾರಿ ತೋಟಗಾರಿಕೆ, ಕೃಷಿ ಇಲಾಖೆ, ವಿಮಾ ಕಂಪನಿಯವರಿಗೆ ಸೂಚನೆ ನೀಡಿದ್ದರು. ಮೊದಲ ಹಂತದ ಹಾನಿ ಸಮೀಕ್ಷೆ ಪೂರ್ಣಗೊಳ್ಳುವ ಮುನ್ನವೇ ಮತ್ತೆ ಅಕಾಲಿಕ ಮಳೆಯಾಗಿರುವುದು ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಶೇ.40ರಷ್ಟು ಫಸಲು ಹಾನಿ

''ಈ ಹಿಂದೆ ಅತಿವೃಷ್ಟಿಯಿಂದ ದ್ರಾಕ್ಷಿ ಬೆಳೆ ಹಾಳಾಗಿತ್ತು. ಈಗ ಒಣದ್ರಾಕ್ಷಿ ಉತ್ಪಾದನೆಗೆಂದು ರ್‍ಯಾಕ್‌ನಲ್ಲಿರುವ ಫಸಲು ಅಕಾಲಿಕ ಮಳೆಯಿಂದ ಹಾನಿಯಾಗಿದೆ. ದ್ರಾಕ್ಷಿ ಕಣಜದಲ್ಲಿ ಒಟ್ಟು ಉತ್ಪಾದನೆಯ ಶೇ.40ರಷ್ಟು ಫಸಲು ಹಾಳಾಗಿದೆ,'' ಎಂದು ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷ ಅಭಯಕುಮಾರ ನಾಂದ್ರೇಕರ್ ತಿಳಿಸಿದ್ದಾರೆ. ''ಈ ವರ್ಷ 1.20 ಲಕ್ಷ ಟನ್ ಒಣದ್ರಾಕ್ಷಿ ಉತ್ಪಾದನೆ ನಿರೀಕ್ಷೆ ಇತ್ತು, ಅದರಲ್ಲಿ ಶೇ.40ರಷ್ಟು ಫಸಲು ಹಾನಿಯಾಗಿದ್ದರಿಂದ ಕೋಟಿಗಟ್ಟಲೆ ನಷ್ಟ ಆಗಿದೆ. ಕೆಲ ರೈತರು ಹತ್ತಾರು ಲಕ್ಷ ರೂ. ಮೌಲ್ಯದ ಉತ್ಪನ್ನ ಕಳೆದುಕೊಂಡಿದ್ದಾರೆ,'' ಎಂದರು.

ಬೆಳೆ ವಿಮೆ ಗೊಂದಲ

''ಬಹುತೇಕ ರೈತರು ದ್ರಾಕ್ಷಿ ಬೆಳೆಗೆ ವಿಮೆ ಮಾಡಿಸಿದ್ದಾರೆ. ಏಪ್ರಿಲ್ ಅಂತ್ಯದವರೆಗೆ ವಿಮಾ ಅವಧಿ ಇದೆ. ತಕ್ಷಣ ಹಾನಿ ಸಮೀಕ್ಷೆ ಕೈಗೊಂಡು ಪರಿಹಾರ ಕೊಡಬೇಕು,'' ಎಂದು ರೈತರು ಆಗ್ರಹಿಸಿದ್ದಾರೆ. ''ಗಿಡದಲ್ಲಿರುವ ದ್ರಾಕ್ಷಿಗಷ್ಟೇ ಬೆಳೆ ವಿಮೆ ಪರಿಹಾರ ಬರುತ್ತದೆ. ರ್‍ಯಾಕ್‌ನಲ್ಲಿರುವ ಒಣದ್ರಾಕ್ಷಿ ವಿಮೆ ವ್ಯಾಪ್ತಿಗೆ ಒಳಪಡದು ಎಂಬ ಸಬೂಬು ಹೇಳಿ ಕಂಪನಿಯವರು ಜಾರಿಕೊಳ್ಳುತ್ತಿದ್ದಾರೆ,''ಎಂದು ರೈತರು ದೂರಿದ್ದಾರೆ.

ಅಕಾಲಿಕ ಮಳೆ ಸುರಿದು ದ್ರಾಕ್ಷಿ ಫಸಲು ಅಪಾರ ಹಾನಿಯಾಗಿದೆ. ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಏಪ್ರಿಲ್ ತನಕ ಬೆಳೆ ವಿಮೆ ಅವಧಿ ಇದ್ದರೂ ವಿಮಾ ಕಂಪನಿಯವರು ಗೊಂದಲ ಮೂಡಿಸಿ ಪರಿಹಾರ ಕೊಡಲು ಹಿಂದೇಟು ಹಾಕುತ್ತಿದ್ದಾರೆ. ಸರಕಾರ ಈ ಬಗ್ಗೆ ಗಮನ ಹರಿಸಿ ತಕ್ಷಣ ರೈತರಿಗೆ ಪರಿಹಾರ ಕೊಡಿಸಬೇಕು.
-ಅಭಯಕುಮಾರ ನಾಂದ್ರೇಕರ್ ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷರು

V-karnataka pg 05

ಪಶ್ಚಿಮ ಏಷ್ಯಾ ಸಂಘರ್ಷದಿಂದ ಕಚ್ಚಾವಸ್ತು ಪೂರೈಕೆಯಲ್ಲಿ ವ್ಯತ್ಯಯ ಆತಂಕ

ರಸಗೊಬ್ಬರ ಸಾಗಣೆ, ಸಂಗ್ರಹದ ಮೇಲೆ ನಿಗಾ

ಪ್ರಜಾವಾಣಿ ವಾರ್ತೆ

11.42 ಲಕ್ಷ ಟನ್
ರಾಜ್ಯದಲ್ಲಿ ಈಗ ಇರುವ ರಸಗೊಬ್ಬರ ದಾಸ್ತಾನು

ಬೆಂಗಳೂರು: ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ರಸಗೊಬ್ಬರ ಉತ್ಪಾದನೆಗೆ ಅಗತ್ಯವಿರುವ ಕಚ್ಚಾವಸ್ತುಗಳ ಪೂರೈಕೆಯಲ್ಲಿ ವ್ಯತ್ಯಯವಾಗುವ ಆತಂಕ ಎದುರಾಗಿದ್ದು, ಗೊಬ್ಬರ ಮಾರಾಟ ಮತ್ತು ಸಾಗಣೆ ಮೇಲೆ ನಿಗಾ ಇರಿಸಲು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸೂಚಿಸಿದ್ದಾರೆ.

ಏಪ್ರಿಲ್ 1ರ ಅಂತ್ಯಕ್ಕೆ ರಾಜ್ಯದಲ್ಲಿ 11.42 ಲಕ್ಷ ಟನ್ ರಸಗೊಬ್ಬರ ದಾಸ್ತಾನು ಇದ್ದು, ಕೃಷಿಯೇತರ ಬಳಕೆ ಮತ್ತು ಹೊರರಾಜ್ಯಕ್ಕೆ ಅಕ್ರಮ ಸಾಗಣೆ ಆಗುವುದನ್ನು ತಡೆಗಟ್ಟಲು ಕೃಷಿ ಇಲಾಖೆ ಅಧಿಕಾರಿಗಳ ಜತೆ ನಡೆದ ಸಭೆಯಲ್ಲಿ ಸಚಿವರು ಈ ಸೂಚನೆ ನೀಡಿದ್ದಾರೆ. ಭಾರತಕ್ಕೆ ಯುಎಇ, ಸೌದಿ ಅರೇಬಿಯಾ, ಬಹ್ರೇನ್ ಮತ್ತು ರಷ್ಯಾದಿಂದ ರಸಗೊಬ್ಬರದ ಕಚ್ಚಾ ವಸ್ತು ಆಮದು ಮಾಡಿಕೊಳ್ಳಲಾಗುತ್ತದೆ. ಅಮೆರಿಕ- ಇಸ್ರೇಲ್ ಮತ್ತು ಇರಾನ್ ನಡುವಣ ಯುದ್ಧದ ಕಾರಣದಿಂದಾಗಿ ರಷ್ಯಾ ಹೊರತುಪಡಿಸಿ ಉಳಿದ ದೇಶಗಳಿಂದ ಕಚ್ಚಾವಸ್ತು ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಕೇಂದ್ರ ಸರ್ಕಾರವು ಮುಂಗಾರು ಹಂಗಾಮಿಗೆ ರಾಜ್ಯಕ್ಕೆ 30.05 ಲಕ್ಷ ಟನ್ ಗೊಬ್ಬರ ಹಂಚಿಕೆ ಮಾಡಿದೆ. ಆದರೆ, ಸಂಘರ್ಷದ ಕಾರಣದಿಂದ ಉತ್ಪಾದನೆ ಕುಸಿದರೆ, ಕೊರತೆಯಾಗುವ ಸಾಧ್ಯತೆ ಇದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ.



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ (ಕೆಎಸ್‌ಸಿಎಂಎಫ್) ಮತ್ತು ಕರ್ನಾಟಕ ಬೀಜ ನಿಗಮ (ಕೆಎಸ್‌ಎಸ್‌ಸಿ) ಮುಖಾಂತರ ಕಾಪು ದಾಸ್ತಾನು ವ್ಯವಸ್ಥೆಯನ್ನು ಬಲಪಡಿಸಿದೆ. ಕಾಪು ದಾಸ್ತಾನಿನಲ್ಲಿ ಈಗ 28,224 ಟನ್ ಗೊಬ್ಬರ ಲಭ್ಯವಿದೆ.

- ಮೂರು ವರ್ಷಗಳಲ್ಲಿ ಜಿಲ್ಲಾವಾರು ಗೊಬ್ಬರ ಬಳಕೆ ಪ್ರಮಾಣದ ಸರಾಸರಿಯನ್ನು ಆಧರಿಸಿ, ಪ್ರತಿ ಜಿಲ್ಲೆಗೆ ಗೊಬ್ಬರ ಹಂಚಿಕೆಯನ್ನು ಮರುನಿರ್ಧಾರ ಮಾಡಲಾಗಿದೆ. ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಪೂರೈಕೆಯಲ್ಲಿ ವ್ಯತ್ಯಯವಾಗದೆ ಇರುವ ರೀತಿಯಲ್ಲಿ ಕಿರು ಯೋಜನೆ ರೂಪಿಸಲಾಗಿದೆ
- ರಾಜ್ಯದಲ್ಲಿ ಯೂರಿಯಾ ಬಳಕೆ ನಿಯಂತ್ರಿಸಲು 'ಫ್ರೂಟ್' ದತ್ತಾಂಶ ಆಧಾರದಲ್ಲಿ 'ಯೂರಿಯಾ ವಿತರಣಾ ಅಪ್ಡಿಕೇಷನ್' ಅನ್ನು ರೂಪಿಲಾಗಿದ್ದು ಆಯ್ದ ಎಂಟು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿ
- ಪ್ರತಿ ವಾರ ವಿಡಿಯೊ ಸಂವಾದ ಮತ್ತು ಸಭೆಗಳ ಮೂಲಕ ಗೊಬ್ಬರ ಪೂರೈಕೆ, ಮಾರಾಟ ಮತ್ತು ಸಂಗ್ರಹ ಸ್ಥಿತಿಯ ಮೇಲ್ವಿಚಾರಣೆ
- ಸಾವಯವ ಕೃಷಿ ಮತ್ತು ನೈಸರ್ಗಿಕ ಕೃಷಿ ಪದ್ಧತಿ ಅಳವಡಿಕೆ, ಜೈವಿಕ ಗೊಬ್ಬರ ಮತ್ತು ನೈಸರ್ಗಿಕ ಗೊಬ್ಬರ ಬಳಕೆ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮ
- 'ಪಸುಧಾಮೃತ' ಯೋಜನೆಯಡಿ ರೈತರಿಗೆ ರಿಯಾಯಿತಿ ದರದಲ್ಲಿ ಸಾವಯವ ಹಾಗೂ ಜೈವಿಕ ಗೊಬ್ಬರಗಳನ್ನು ಒದಗಿಸಲು ಕ್ರಮ

Prajavani pg 03